# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1377 |
| ಉತ್ತರಿಸಬೇಕಾದ ದಿನಾಂಕ | :18.12.2025 |
| ಸದಸ್ಯರ ಹೆಸರು | :ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಾಧಕ ಕ್ರೀಡಾಪಟುಗಳನ್ನು ಸರ್ಕಾರದ ವಿವಿಧ ಉದ್ಯೋಗಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆಯೇ; | ಹೌದು. |
| ಆ) | ಇದ್ದಲ್ಲಿ, ಯಾವ ಯಾವ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದವರಿಗೆ 'ಎ', 'ಬಿ', ಮತ್ತು 'ಸಿ' ದರ್ಜೆ ಹುದ್ದೆ ನೀಡಲಾಗುವುದು; ಶೈಕ್ಷಣಿಕ ಅರ್ಹತೆಯನ್ನೂ ಪರಿಗಣಿಸಲಾಗುವುದೇ; ಮಾನದಂಡಗಳೇನು; (ವಿವರವಾದ ಮಾಹಿತಿ ನೀಡುವುದು); | ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 204 ಸೇನೆನಿ 2022, ದಿನಾಂಕ 21-03-2023 ರನ್ವಯ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೆಲವು ಹುದ್ದೆಗಳಿಗೆ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ವ್ಯಕ್ತಿಗಳ ನೇಮಕಾತಿ) (ವಿಶೇಷ) ನಿಯಮಗಳು, 2023 ಜಾರಿಗೊಳಿಸಿದ್ದು, ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್‌ಸ್‌ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಗುಂಪು-ಎ ವೃಂದ ಹಾಗೂ ಏಷ್ಯನ್ ಗೇಮ್ಸ್, ಏಷ್ಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್‌ಸ್‌ಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಗುಂಪು-ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ (ಗುಂಪು-ಸಿ ಮತ್ತು ಗುಂಪು-ಡಿ) ವಿದ್ಯಾರ್ಹತೆ ಅನುಸಾರ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದೆ.<br><br>ಕ್ರೀಡಾಪಟುಗಳ ಅರ್ಹತೆ ಮತ್ತು ಸೂಕ್ತತೆಗೊಳಪಟ್ಟು ಈ ಕೆಳಕಂಡಂತೆ ಶೈಕ್ಷಣಿಕ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ.<br><br>ಅ) ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯವು ಯಾವುದೇ ವಿಷಯದಲ್ಲಿ ನೀಡಿದ ಸ್ನಾತಕ ಪದವಿಯನ್ನು ಹೊಂದಿರುವ ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್‌ಸ್‌ಗಳಲ್ಲಿ ಪದಕ ವಿಜೇತರಾದವರಿಗೆ ಗುಂಪು-ಎ ಹುದ್ದೆಗೆ ನಿಯಮಾನುಸಾರ ನೇಮಿಸಲಾಗುವುದು.<br><br>ಆ) ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾಲಯವು ಯಾವುದೇ ವಿಷಯದಲ್ಲಿ ನೀಡಿದ ಸ್ನಾತಕ ಪದವಿಯನ್ನು ಹೊಂದಿರುವ ಏಷ್ಯನ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್‌ಸ್‌ನಲ್ಲಿ ಪದಕ ವಿಜೇತರಾದವರಿಗೆ ಗುಂಪು-ಬಿ ಹುದ್ದೆಗೆ ನಿಯಮಾನುಸಾರ ನೇಮಿಸಲಾಗುವುದು.<br><br>ಇ)ಸ್ನಾತಕ ಪದವಿಗಿಂತ ಕಡಿಮೆ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರುವ ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್, ಏಷ್ಯನ್ ಅಥವಾ ಏಷ್ಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್‌ಸ್‌ನಲ್ಲಿ ಪದಕ ವಿಜೇತರಾದವರಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿನ ಯಾವುದೇ ಸಮೂಹ-ಸಿ ಅಥವಾ ಗ್ರೂಪ್-ಡಿ ಹುದ್ದೆಗಳಿಗೆ ನಿಯಮಾನುಸಾರ ನೇಮಿಸಲಾಗುವುದು. |

| | | |
|---|---|---|
| | | ಪದಕ ವಿಜೇತರು ಭಾರತದ ನಾಗರಿಕನಾಗಿರಬೇಕು ಮತ್ತು ರಾಷ್ಟ್ರ ಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಪೂರ್ವದಲ್ಲಿ ಕನಿಷ್ಠ ಹತ್ತು ವರ್ಷಗಳ ಅವಧಿಯವರೆಗೆ ಕರ್ನಾಟಕದ ನಿವಾಸಿಯಾಗಿರಬೇಕು ಎಂಬ ನಿಬಂಧನೆ ನಿಗಧಿಪಡಿಸಲಾಗಿದೆ. |
| ಇ) | ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ವಿಜೇತರಾದ ಎಷ್ಟು ಮಂದಿ ರಾಜ್ಯದ ಕ್ರೀಡಾಪಟುಗಳಿಗೆ ಹುದ್ದೆ ನೀಡಲಾಗಿದೆ; ನೀಡಿದ್ದಲ್ಲಿ, ಯಾರು ಯಾರಿಗೆ ಯಾವ ಹುದ್ದೆ ಯಾವ ವರ್ಷ ನೀಡಲಾಗಿದೆ; (ವಿವರ ನೀಡುವುದು); | ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ಸಾಧಕ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ, ಗುಂಪು-ಬಿ ಮತ್ತು ಇತರೆ ಹುದ್ದೆಗಳಿಗೆ ವಿಶೇಷ ನೇಮಕಾತಿಯಡಿ ಒಟ್ಟು 13 ಕ್ರೀಡಾಪಟುಗಳಿಗೆ ಅವಕಾಶ ಪತ್ರ (Offer Letter) ಗಳನ್ನು ವಿತರಿಸಲಾಗಿದೆ. ಈ ಪೈಕಿ 2025-26ನೇ ಸಾಲಿನಲ್ಲಿ 10 ಕ್ರೀಡಾಪಟುಗಳನ್ನು ವಿವಿಧ ಇಲಾಖೆಗಳಲ್ಲಿ ಗುಂಪು-ಬಿ ವೃಂದದ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. (ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ). |
| ಈ) | ಸಾಧಕ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿ ನೀಡಲು ಬಾಕಿ ಇದ್ದಲ್ಲಿ ಎಷ್ಟು ಅರ್ಜಿಗಳು ಪರಿಶೀಲನಾ ಹಂತದಲ್ಲಿವೆ ಅಥವಾ ಆಯ್ಕೆ ಸಮಿತಿ ಮುಂದಿದೆ; (ವಿವರ ನೀಡುವುದು) | ಪ್ರಸ್ತುತ ವಿಶೇಷ ನೇಮಕಾತಿ ನಿಯಮದಡಿ ಆಯ್ಕೆಯಾಗಿ ಅವಕಾಶ ಪತ್ರ (Offer Letter) ನೀಡಲಾಗಿರುವ ಇಬ್ಬರು (2) ಕ್ರೀಡಾಪಟುಗಳಿಗೆ ತಲಾ ಗುಂಪು-ಎ ಮತ್ತು ಗುಂಪು-ಬಿ ವೃಂದದ ಹುದ್ದೆಗೆ ನೇಮಕಾತಿ ಆದೇಶ ನೀಡುವ ಪೂರ್ವದಲ್ಲಿನ ಶೈಕ್ಷಣಿಕ ಮತ್ತಿತರ ಅರ್ಹತಾ ದಾಖಲೆಗಳ ನೈಜತೆ ದೃಢೀಕರಣ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>ಒಬ್ಬರು ಕ್ರೀಡಾಪಟುವಿಗೆ ಗುಂಪು-ಸಿ ವೃಂದದ ಹುದ್ದೆಗೆ ಅವಕಾಶ ಪತ್ರ ನೀಡಲಾಗಿದ್ದು, ಗುಂಪು-ಬಿ ವೃಂದದ ಹುದ್ದೆ ನೀಡುವಂತೆ ಕೋರಿಕೆ ಸಲ್ಲಿಸಿದ್ದಾರೆ. ಸದರಿ ಮನವಿ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. (ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ).<br><br>ಅಲ್ಲದೇ, ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪದಕ ವಿಜೇತರಾದ ಒಬ್ಬರು ಕ್ರೀಡಾಪಟು ತಾನು ಪದವಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದು, ಪದವಿಯನ್ನು ಪರಿಗಣಿಸುವಂತೆ ಕೋರಿರುತ್ತಾರೆ. ಸದರಿ ಕ್ರೀಡಾಪಟುವಿನ ಮನವಿ ಹಿನ್ನೆಲೆಯಲ್ಲಿ ಪದವಿ ಪ್ರಮಾಣ ಪತ್ರ ಸಲ್ಲಿಸುವವರೆಗೆ ಅವರ ಪ್ರಕರಣವನ್ನು ವಿಲೇ ಇಡಲು ಆಯ್ಕೆ ಸಮಿತಿಯು ತೀರ್ಮಾನಿಸಿರುತ್ತದೆ. ಪ್ರಸ್ತುತ ಸದರಿ ಕ್ರೀಡಾಪಟು ಪದವಿ ವಿದ್ಯಾರ್ಹತೆಯನ್ನು ಪೂರೈಸಿ, ಗುಂಪು-ಬಿ ವೃಂದದ ಹುದ್ದೆಗೆ ಪರಿಗಣಿಸುವಂತೆ ಕೋರಿರುತ್ತಾರೆ. ಸದರಿ ಕ್ರೀಡಾಪಟು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಆಯ್ಕೆ ಸಮಿತಿ ಮುಂದೆ ಮಂಡಿಸಲು ಕ್ರಮ ವಹಿಸಲಾಗುವುದು. |
| ಉ) | ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲೂ ಕ್ರೀಡಾಪಟುಗಳಿಗೆ ಮೀಸಲಾತಿ ಕಲ್ಪಿಸಲಾಗಿದೆಯೇ ಅಥವಾ ಸೀಮಿತ ಇಲಾಖೆಗಳಲ್ಲಿ ಮಾತ್ರ ಮೀಸಲಾತಿ ಇದೆಯೇ; ಶೇಕಡವಾರು ಎಷ್ಟು ಮೀಸಲಾತಿ ಸೌಲಭ್ಯವಿದೆ? (ವಿವರವಾದ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೆಲವು ಹುದ್ದೆಗಳಿಗೆ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ವ್ಯಕ್ತಿಗಳ ನೇಮಕಾತಿ) (ವಿಶೇಷ) ನಿಯಮಗಳು, 2023ರಡಿ ಅರ್ಹರಾಗುವ ಕ್ರೀಡಾಪಟುಗಳಿಗೆ ಗುಂಪು-ಎ ಮತ್ತು ಗುಂಪು-ಬಿ ಹುದ್ದೆಗಳಿಗೆ ಸೀಮಿತ ಇಲಾಖೆಗಳಲ್ಲಿ ಸೀಮಿತ ಹುದ್ದೆಗಳು ಹಾಗೂ ಗುಂಪು-ಸಿ ಮತ್ತು ಗುಂಪು-ಡಿ ಹುದ್ದೆಗಳಿಗೆ ಸರ್ಕಾರದ ಎಲ್ಲಾ ಇಲಾಖೆಗಳ ನೇಮಕಾತಿಗಳಲ್ಲಿ ಮೀಸಲಾತಿ ಕಲ್ಪಿಸಿದೆ.<br><br>ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕ್ರೀಡಾ ಸಾಧಕ ಅಭ್ಯರ್ಥಿಗಳಿಗೆ ಶೇಕಡ 2ರಷ್ಟು ಹುದ್ದೆಗಳನ್ನು ಮೀಸಲಿಡುವ ಕುರಿತು ಸಾಮಾನ್ಯ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ನಿಯಮ ರೂಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | ಅದೇ ರೀತಿ, ಅರಣ್ಯ ಇಲಾಖೆಯಲ್ಲಿ ಸಾಧಕ ಕ್ರೀಡಾಪಟುಗಳಿಗೆ 3% ಮೀಸಲಾತಿ ಕಲ್ಪಿಸುವ ಬಗ್ಗೆ ನಿಯಮಗಳನ್ನು ರೂಪಿಸುವ ಕುರಿತು ಅರಣ್ಯ ಇಲಾಖೆಯು ಕ್ರಮ ವಹಿಸುತ್ತಿದೆ.<br><br>ಮುಂದುವರೆದು, ಪೊಲೀಸ್ ಇಲಾಖೆಯಲ್ಲಿ ಡಿ.ವೈ.ಎಸ್.ಪಿ., ಸಬ್ ಇನ್‌ಸ್ಪೆಕ್ಟರ್ ಹಾಗೂ ಕಾನ್‌ಸ್ಟೇಬಲ್‌ಗಳ ನೇರ ನೇಮಕಾತಿಯಲ್ಲಿ ಸಾಧಕ ಕ್ರೀಡಾಪಟುಗಳಿಗೆ 3% ಮೀಸಲಾತಿ ಜಾರಿಗೊಳಿಸಲಾಗಿದ್ದು, ನೇಮಕ ಪ್ರಕ್ರಿಯೆ ಕೈಗೊಳ್ಳಲಾಗಿದೆ. |

**ಸಂಖ್ಯೆ: ವೈಎಸ್‌ಡಿ/ಇವೈಡಬ್ಲ್ಯೂ/235/2025**

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ.

<u>ಅನುಬಂಧ-1</u>

**<u>ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುಂಪು-ಎ, ಗುಂಪು-ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮದಡಿ ಆಯ್ಕೆಯಾಗಿ ಅವಕಾಶ ಪತ್ರ ನೀಡಲಾಗಿರುವ ಹಾಗೂ ನೇಮಕಾತಿ ಮಾಡಲಾಗಿರುವ ಕ್ರೀಡಾಪಟುಗಳ ವಿವರ.</u>**

| ಕ್ರಸ | ಅಭ್ಯರ್ಥಿಯ ಹೆಸರು | ಕ್ರೀಡೆಯ ಹೆಸರು | ಹಂಚಿಕೆ ಮಾಡಲಾದ ಹುದ್ದೆ ಮತ್ತು ಇಲಾಖೆ | ವೃಂದ | ಷರಾ |
|---|---|---|---|---|---|
| 1 | ಕು. ದಿವ್ಯಾ ಟಿ.ಎಸ್. | ಶೂಟಿಂಗ್ | ಆರ್ಥಿಕ ಇಲಾಖೆಯ ಕರ್ನಾಟಕ ಅಬಕಾರಿ ಸೇವೆಯ ಅಬಕಾರಿ ಉಪ ಅಧೀಕ್ಷಕರು | ಗುಂಪು-ಬಿ | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 2 | ಕು. ಉಷಾರಾಣಿ ಎನ್. | ಕಬಡ್ಡಿ | ಆಹಾರ, ನಾಗರಿಕ ಸರಬರಾಜು ಇಲಾಖೆ (ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜುಗಳ ಸೇವೆ)ಯ ಸಹಾಯಕ ನಿರ್ದೇಶಕರು | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 3 | ಶ್ರೀಮತಿ ಸುಷ್ಮಿತ ಪವಾರ್ ಓ. | ಕಬಡ್ಡಿ | ಆಹಾರ, ನಾಗರಿಕ ಸರಬರಾಜು ಇಲಾಖೆ (ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜುಗಳ ಸೇವೆ)ಯ ಸಹಾಯಕ ನಿರ್ದೇಶಕರು | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 4 | ಶ್ರೀ ನಿಕ್ಕಿನ್ ತಿಮ್ಮಯ್ಯ ಸಿ.ಎ. | ಹಾಕಿ | ಆರ್ಥಿಕ ಇಲಾಖೆಯ ಕರ್ನಾಟಕ ಅಬಕಾರಿ ಸೇವೆಯ ಅಬಕಾರಿ ಉಪ ಅಧೀಕ್ಷಕರು | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 5 | ಶ್ರೀ ಎಸ್.ವಿ. ಸುನೀಲ್ | ಹಾಕಿ | ಆರ್ಥಿಕ ಇಲಾಖೆಯ ಕರ್ನಾಟಕ ಅಬಕಾರಿ ಸೇವೆಯ ಅಬಕಾರಿ ಉಪ ಅಧೀಕ್ಷಕರು | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 6 | ಶ್ರೀ ಕಿಶನ್ ಗಂಗೊಳ್ಳಿ | ಚೆಸ್ (ಅಂಧ) | ಸಹಕಾರ ಇಲಾಖೆ (ಕರ್ನಾಟಕ ಸಹಕಾರ ಲೆಕ್ಕ ಪರಿಶೋಧನಾ ಸೇವೆ)ಯ [illegible] (ಪ್ರಸ್ತುತ ಸಹಾಯಕ ನಿರ್ದೇಶಕರು) | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |

| | | | | | |
|---|---|---|---|---|---|
| 9 | ಶ್ರೀ ಶರತ್ ಎಂ.ಎಸ್. | ಪ್ಯಾರಾ ಅಥ್ಲೆಟಿಕ್ಸ್ | ಸಹಕಾರ ಇಲಾಖೆ (ಕರ್ನಾಟಕ ಸಹಕಾರ ಲೆಕ್ಕ ಪರಿಶೋಧನಾ ಸೇವೆ)ಯ ಸಹಾಯಕ ಮುಖ್ಯ ಲೆಕ್ಕ ಪರಿಶೋಧಕರು (ಪ್ರಸ್ತುತ ಸಹಾಯಕ ನಿರ್ದೇಶಕರು) | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |
| 10 | ಶ್ರೀ ಗುರುರಾಜ | ವೇಯ್ಟ್ ಲಿಫ್ಟಿಂಗ್ | ಸಹಕಾರ ಇಲಾಖೆ (ಕರ್ನಾಟಕ ಸಹಕಾರ ಲೆಕ್ಕ ಪರಿಶೋಧನಾ ಸೇವೆ)ಯ ಸಹಾಯಕ ಮುಖ್ಯ ಲೆಕ್ಕ ಪರಿಶೋಧಕರು (ಪ್ರಸ್ತುತ ಸಹಾಯಕ ನಿರ್ದೇಶಕರು) | | ನೇಮಕಾತಿ ಮಾಡಲಾಗಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆ. |

## ಅನುಬಂಧ-2

**ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುಂಪು-ಎ, ಗುಂಪು-ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮದಡಿ ಆಯ್ಕೆಯಾಗಿ ಅವಕಾಶ ಪತ್ರ ನೀಡಲಾಗಿರುವ ಹಾಗೂ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುವ ವಿವರ**

| ಕ್ರಸ | ಅಭ್ಯರ್ಥಿಯ ಹೆಸರು | ಕ್ರೀಡೆಯ ಹೆಸರು | ಹಂಚಿಕೆ ಮಾಡಲಾದ ಹುದ್ದೆ ಮತ್ತು ಇಲಾಖೆ | ವೃಂದ | ಷರಾ |
|---|---|---|---|---|---|
| 1 | ಶ್ರೀ ಗಿರೀಶ್ ಹೆಚ್.ಎನ್. | ಪ್ಯಾರಾ ಅಥ್ಲೆಟಿಕ್ಸ್ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಕರ್ನಾಟಕ ಸಾಮಾನ್ಯ ಸೇವೆ) (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ)ಯ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ | ಗುಂಪು-ಎ | ಅವಕಾಶ ಪತ್ರ (Offer Letter) ನೀಡಲಾಗಿದ್ದು, ನೇಮಕಾತಿ ಪೂರ್ವದ ಶೈಕ್ಷಣಿಕ ಮತ್ತಿತರ ಅರ್ಹತಾ ದಾಖಲೆಗಳ ನೈಜತೆ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. |
| 2 | ಶ್ರೀ ನಿಹಾಲ್ ಜೋಯಲ್ ಡಬ್ಲ್ಯೂ. | ಅಥ್ಲೆಟಿಕ್ಸ್ | ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಗುಂಪು-ಬಿ | ಅವಕಾಶ ಪತ್ರ (Offer Letter) ನೀಡಲಾಗಿದ್ದು, ನೇಮಕಾತಿ ಪೂರ್ವದ ಶೈಕ್ಷಣಿಕ ಮತ್ತಿತರ ಅರ್ಹತಾ ದಾಖಲೆಗಳ ನೈಜತೆ ಪರಿಶೀಲನಾ ಕಾರ್ಯ ದಿನಾಂಕ: 05-12-2025 ರಂದು ಪೂರ್ಣಗೊಂಡಿದ್ದು, ನೇಮಕಾತಿ ಆದೇಶ ಶೀಘ್ರ ನೀಡಲಾಗುವುದು. |
| 3 | ಕು. ಮಲಪ್ರಭಾ ಯಲ್ಲಪ್ಪ ಜಾಧವ | ಕುರಾಶ್ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರು | ಗುಂಪು-ಸಿ | ಗುಂಪು-ಸಿ ವೃಂದದ ಹುದ್ದೆಗೆ ಅವಕಾಶ ಪತ್ರ ನೀಡಲಾಗಿದ್ದು, ಗುಂಪು-ಬಿ ವೃಂದದ ಹುದ್ದೆ ನೀಡುವಂತೆ ಕೋರಿಕೆ ಸಲ್ಲಿಸಿದ್ದಾರೆ. ಸದರಿ ಮನವಿ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |